## ಬೆಟ್ಟದಾವರೆ

ಮಕರಂಗ ಇಂಡಿಕಾ ಎಂಬ ವೈಜ್ಞಾನಿಕ ಹೆಸರನ್ನು ಹೊಂದಿರುವ ಬೆಟ್ಟದಾವರೆ ಎಲ್ಲಾ ಕಡೆಗಳಲ್ಲಿಯೂ ಸಾಮಾನ್ಯವಾಗಿ ಬೆಳೆಯುತ್ತದೆ. ಪೊದೆಯಂತೆ ಬೆಳೆಯುವ ಈ ಗಿಡದ ಹೂವುಗಳು ಕೆಂಪು, ಬಿಳಿ ಬಣ್ಣಗಳಲ್ಲಿ ಕಂಡುಬರುತ್ತದೆ. ನಮ್ಮ ಮನೆಯಂಗಳದಲ್ಲಿ ಬೆಳೆದ ಈ ಹೂವು ಬೆಳಿಗ್ಗೆ ಅರಳಿದಾಗ ಬಿಳಿ ಬಣ್ಣ ಹೊಂದಿದ್ದು, ಸಂಜೆಯ ಹೊತ್ತಿಗೆ ಕೆಂಪು ಬಣ್ಣದಲ್ಲಿ ಗೋಚರಿಸಿ ಅಚ್ಚರಿ ಮೂಡಿಸಿದೆ.

—ಅನ್ವಿತಾ ಧರ್ಮೇಂದ್ರ, ಬಿಲ್ಲೇಶ್ವರ, ಹುಂಚ







## ಗಗನಚುಂಬಿ ಮರ

ಮನುಷ್ಯ ನೆಲದ ಮೇಲೆ ಬೆಳೆದ ಮರಗಳನ್ನು ನಾಶಮಾಡುತ್ತಿರುವುದನ್ನು ಮನಗಂಡ ಈ ಅರಳಿ ಮರ ತನ್ನನ್ನು ರಕ್ಷಿಸಿಕೊಳ್ಳಲು ಹೊಗೆ ಕೊಳವೆಯ ಮೇಲೇರಿದೆ. ಸುಮಾರು ಐವತ್ತು ಅಡಿ ಎತ್ತರದ ಹೊಗೆಗೂಡಿನ ತುದಿಯಲ್ಲಿ ಬೆಳೆಯುತ್ತಿದೆ. ಇದನ್ನು ನೀವು ದಾವಣಗೆರೆಯಲ್ಲಿರುವ ರೈಸ್ ಮಿಲ್ ಒಂದರಲ್ಲಿ ಕಾಣಬಹುದು.

ವಿಷಮ ಪರಿಸ್ಥಿಯಲ್ಲಿಯೂ ಜೀವನೋತ್ಸಾಹ ತೋರಿ ಇತರರಿಗೆ ಮಾದರಿಯಾಗಿದೆ. ವಿವೇಚನಾ ಶಕ್ತಿಯಿರುವವರಿಗೆ ಪ್ರೇರಣಾದಾಯಕವಾಗಿರುವ ಈ ಮರ ಬದಲಾದ ಪರಿಸರ ಪರಿಸ್ಥಿತಿಯನ್ನು ಸೂಚಿಸುತ್ತಿದೆ. ವಿಷವನ್ನೇ ಕುಡಿದು ಅಮೃತವನ್ನು ನೀಡುವ ಇದರ ಗುಣವನ್ನೇ ಮನುಷ್ಯರು ಅಳವಡಿಸಿಕೊಂಡರೆ ಜಗತ್ತು ಹೆಚ್ಚು ವಾಸಯೋಗ್ಯವಾಗಬಹುದೇನೋ.

—ಎಸ್. ಶಿಶುಪಾಲ, ದಾವಣಗೆರೆ

## ಅಣಬೆ ಪಾತ್ರೆ

ಮಲೆನಾಡಿನ ಪ್ರದೇಶಗಳಲ್ಲಿ ವೈವಿಧ್ಯದ ವಸ್ತುಗಳನ್ನು ನೋಡಬಹುದು. ನೈಸರ್ಗಿಕವಾಗಿ ಬೆಟ್ಟ ಗುಡ್ಡ ತೋಟಗಳಲ್ಲಿ ಒಂದೊಂದು ರೀತಿಯ ವಿಸ್ಮಯಗಳನ್ನು ಕಂಡು ಆನಂದಿಸಬಹುದು. ಮಳೆಗಾಲ ಮುಗಿಯುತ್ತಿದೆ ಎನ್ನುವಾಗ ಅಡಿಕೆ ತೋಟಕ್ಕೆ ಹೋಗಿದ್ದೆ. ಅಲ್ಲಿ ಒಂದು ಅಚ್ಚರಿ ಕಂಡಿತು. ಅಡಿಕೆ ಮರದ ಬುಡದಲ್ಲಿ ಅಣಬೆ ಪಾತ್ರೆ ಕಂಡೆ. ಸುಂದರವಾದ ಹೂವಿನಾಕೃತಿಯಲ್ಲಿ ಬಣ್ಣ ಬಣ್ಣಗಳಿಂದ ಕೂಡಿದ ಅಣಬೆಗಳಲ್ಲಿ ನೀರು ತುಂಬಿ ಪ್ರತಿಫಲಿಸುತ್ತಿತ್ತು. ಅಡಿಕೆ ಮರದ ಬುಡದಲ್ಲಿ ಇರುವುದರಿಂದ ಮರಕ್ಕೆ ಇದರ ತೇವಾಂಶ ಕೆಲದಿನಗಳ ಮಟ್ಟಿಗೆ ಸಿಗುತ್ತದೆ. ಪ್ರಕೃತಿಯ ಸೊಬಗು ಹೀಗೆ.

—ಗಣಪತಿ ಕಂಚಿಪಾಲ, ತೇಲಂಗಾರ

